ಏಕೆಂದರೆ ಅದನ್ನು ಹಾಸ್ಯಾಸ್ಪದ, ಫ್ಯಾಕ್ಟ್ಸ್‌ನ್ನು ಹೇಳಿಲ್ಲ, ಶಂಕರಾಚಾರ್ಯರನ್ನು ಹೇಳಿದರು, ಮಧ್ವಾಚಾರ್ಯರನ್ನು ಹೇಳಿದರು, ಬಸವಣ್ಣನವರನ್ನು ಹೇಳಿದರು ಆ ತರಹ ಏಕೆಂದರೆ ರಸಿಕ ಇದ್ದರೆ ಕಾವ್ಯ ಹಾಡಬಹುದು, ಅರಸಿಕನಿಗೆ ಕಾವ್ಯ ಹಾಡತಕ್ಕಂಥ ಶಿಕ್ಷೆ ಕೊಡಬೇಡಪ್ಪ ದೇವರೇ ಎಂದು ಕವಿ ಕೇಳುತ್ತಾನೆ. ಅದಕ್ಕೋಸ್ಕರ ಇವತ್ತು I do agree. But, factually I was more elaborate than my previous speeches. ಏನಾದರೂ ಇದ್ದರೆ ಮುಂದಿನ ಅಧಿವೇಶನದಲ್ಲಿ ನೋಡೋಣ.

ಶ್ರೀ ಕಾಗೋಡು ತಿಮ್ಮಪ್ಪ : ಮಾಟಾಳ್ ನಾಗರಾಜ್‌ರಂಥ ರಸಿಕರು ಇದ್ದಾಗಲೂ ಏಕೆ ಹೋಗಬೇಕು, ಅವರ ಕುರಿತು ಆದರೂ ಹೇಳಬಹುದಲ್ಲಾ, ನಾವಾದರೂ ಅರಸಿಕರು...

ಶ್ರೀ ಮಾಟಾಳ್ ನಾಗರಾಜ್ : ಕಾಗೋಡು ತಿಮ್ಮಪ್ಪನವರು ಎಷ್ಟು ರಸಿಕರೆಂಬುದು ನಮಗೆ ಗೊತ್ತಿದೆ. ಅವರನ್ನು ರಸಿಕರು ಅಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅವರಿಗೆ ರಸಿಕತೆಯಲ್ಲಿ ಅನುಭವವಿದೆ. ಸಮಾಜವಾದಿಗಳೆಲ್ಲಾ ರಸಿಕರೇ, ಅದನ್ನು ತಳ್ಳಿ ಹಾಕುವುದಕ್ಕಾಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಈಗ ಜಂಟಿ ಸದನ ಸಮಿತಿ ಮಾಡುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಏನು ಮಾಡುತ್ತಾರೆ ? ಜಂಟಿ ಸದನ ಸಮಿತಿ ಮಾಡಲಿಲ್ಲವೆಂದರೆ, there is no alternative. We have to sit there.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಮತ್ತು ಶ್ರೀ ಹೆಚ್. ಎನ್. ನಂಜೇಗೌಡ ಅವರು ಸದನದ ಬಾವಿಗೆ ಆಗಮಿಸಿ ಧರಣಿ ಹೂಡಿದರು. ಹಾಗೂ ಬಿ.ಜೆ.ಪಿ. ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ ಮುಗಿಯಿತು. ಪ್ರಸ್ತಾವನೆಯನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಹೀಗಿದೆ

"8ನೇ ಮಾರ್ಚ್ 1999 ರಂದು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರುಗಳಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ. "

ಪ್ರಸ್ತಾವವನ್ನು ಅಂಗೀಕರಿಸಲಾಗಿದೆ

ವಂದನಾ ನಿರ್ಣಯವನ್ನು ಸನ್ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು.

3. ಶಾಸನ ರಚನೆ

ವಿಧೇಯಕದ ಮಂಡನೆ ಹಾಗೂ ಅಂಗೀಕಾರ

ಕರ್ನಾಟಕ ಸರ್ಕಾರ ಖಾತರಿಗಳ ಮೇಲಿನ ಮಿತಿ ವಿಧೇಯಕ, 1999

ಮಂಡನೆಗೆ ಅನುಮತಿ ಕೋರಿಕೆ